# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1156 |
| ಉತ್ತರಿಸುವ ದಿನಾಂಕ | 28.12.2022 |
| ಉತ್ತರಿಸುವ ಸಚಿವರು | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ನಗರ ಸಭೆ ಜಿ+3 ವಸತಿ ಯೋಜನೆಯಡಿ ಎಷ್ಟು ಅರ್ಜಿಗಳು ಬಂದಿವೆ; ಇದರಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಕರ ವಸೂಲಿಗಾರರ ವರದಿಯಂತೆ ಎಷ್ಟು ಫಲಾನುಭವಿಗಳು ಅರ್ಹರಾಗಿರುತ್ತಾರೆ; | ಬೀದರ್ ನಗರ ಸಭೆ ವ್ಯಾಪ್ತಿಯಲ್ಲಿ ಜಿ+3 ವಸತಿ ಯೋಜನೆಯಡಿ 6495 ಅರ್ಜಿಗಳು ಬಂದಿರುತ್ತವೆ. ಈ ಪೈಕಿ ಕರ ವಸೂಲಿಗಾರರ ವರದಿಯಂತೆ 2899 ಫಲಾನುಭವಿಗಳು ಅರ್ಹರಾಗಿರುತ್ತಾರೆ. |
| ಆ) | ಈ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗಳ ತಮ್ಮ ಪಾಲಿನ ವಂತಿಕೆ ಮೊತ್ತದಲ್ಲಿ ಕನಿಷ್ಟ ಎಷ್ಟು ರೂಪಾಯಿಗಳು ಪ್ರಾರಂಭಿಕ ಠೇವಣಿಗಾಗಿ ಕಡ್ಡಾಯವಾಗಿ ಪಾವತಿಸಬೇಕು. ಪಾವತಿಸಿದಲ್ಲಿ, ಎಷ್ಟು ಫಲಾನುಭವಿಗಳು ಇಲ್ಲಿಯವರೆಗೆ ಠೇವಣಿ ಹಣವನ್ನು ಪಾವತಿಸಿದ್ದಾರೆ; | ಸದರಿ ಯೋಜನೆಯಡಿ ಫಲಾನುಭವಿಗಳ ಪಟ್ಟಿ ಇನ್ನೂ ಅಂತಿಮಗೊಂಡಿರುವುದಿಲ್ಲ. AHP ಯೋಜನೆಗಳಡಿ ಪ್ರಸ್ತುತ ನಿಗದಿಪಡಿಸಿರುವ ಪ್ರಾರಂಭಿಕ ವಂತಿಕೆ ಮೊತ್ತ ರೂ. 10,000/-. |
| ಇ) | ಜಿ+3 ವಸತಿ ಕಟ್ಟಡ ಕಾಮಗಾರಿಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ; ಯಾವ ಹಂತದ ಗುತ್ತಿಗೆದಾರರಿಂದ ಟೆಂಡರ್‌ಕರೆಯಲಾಗಿದೆ? (ವಿವರನೀಡುವುದು) | ಸದರಿ ಯೋಜನೆಯಡಿ ಇನ್ನೂ ಫಲಾನುಭವಿಗಳ ಆಯ್ಕೆ ಆಗದೇ ಇರುವುದರಿಂದ ಮತ್ತು ಫಲಾನುಭವಿಗಳು ವಂತಿಕೆ ಪಾವತಿಸದೇ ಇರುವುದರಿಂದ ಟೆಂಡರ್ ಆಹ್ವಾನಿಸಿರುವುದಿಲ್ಲ.<br><br>ಆದಾಗ್ಯೂ, ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಅವಧಿ ದಿನಾಂಕ: 31.03.2022 ಕ್ಕೆ ಪೂರ್ಣಗೊಂಡಿದ್ದು, ಸದರಿ ಯೋಜನೆಯನ್ನು ಕೇಂದ್ರ ಸರ್ಕಾರವು ದಿನಾಂಕ:31.03.2024 ರವರೆಗೆ ವಿಸ್ತರಿಸಿದೆ. |

ಸಂಖ್ಯೆ: ವಇ 267 ಹೆಚ್‌ಎಫ್‌ಎ 2022]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು